

ರಾಷ್ಟ್ರೀಯ ಹಬ್ಬಕ್ಕೆ ಉಡುಗೆ ತೊಡುಗೆಯಲ್ಲೂ ವಿಶಿಷ್ಟ ಮೆರುಗು. ಸ್ವಾತಂತ್ರ್ಯೋತ್ಸವ ಸಂಭ್ರಮಕ್ಕೆ ತ್ರಿವರ್ಣ ಉಡುಗೆ ಸಾಥ್ ನೀಡಿದರೆ ಮತ್ತಷ್ಟು ಕಳೆ. ಪುಟ್ಟ ಮಕ್ಕಳ ಸಡಗರಕ್ಕಂತೂ ಇಂಥ ಉಡುಪೇ ವಿಶಿಷ್ಟವಾಗಿ ವಿಜೃಂಭಿಸುತ್ತದೆ.

■ ಮಂಜುಶ್ರೀ

# ಸ್ವಾತಂತ್ರ್ಯಕ್ಕೆ ತ್ರಿವರ್ಣ ಮೆರುಗು

ಆಗಸ್ಟ್ 15 ಎಂದರೆ ಎಲ್ಲೆಡೆ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮ. ಅಂದು ಮುಂಜಾನೆಯಿಂದಲೇ ಆರಂಭವಾಗುವ ಸಂಭ್ರಮಾಚರಣೆ ಇಡೀ ದಿನ ತಾಯ್ನೆಲದ ಕುರಿತ ಅಭಿಮಾನ, ಹೆಮ್ಮೆಯಲ್ಲಿ ಮೇಳೈಸುತ್ತದೆ. ಈ ಸಂಭ್ರಮಾಚರಣೆಯಲ್ಲಿ ಉಡುಗೆ–ತೊಡುಗೆಯದ್ದೂ ಮಹತ್ವದ ಪಾತ್ರ.

ಶಾಲಾ–ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳಿಂದ ಹಿಡಿದು ಉದ್ಯೋಗಸ್ಥರೂ ಅಂದು ರಾಷ್ಟ್ರಧ್ವಜದಲ್ಲಿರುವ ಮೂರು ಬಣ್ಣಗಳ ಥೀಮ್ ಪ್ರಕಾರವೇ ಉಡುಗೆ ಧರಿಸುವುದು ವಾಡಿಕೆ. ಅಂದು ಎಲ್ಲಿ ನೋಡಿದರೂ ಕೇಸರಿ, ಬಿಳಿ, ಹಸಿರು ಹಾಗೂ ನೀಲಿ ಬಣ್ಣಗಳ ಕಾಂಬಿನೇಷನ್ ಉಡುಗೆಗಳದ್ದೇ ಕಾರುಬಾರು. ಪುಟ್ಟ ಹೆಣ್ಣುಮಕ್ಕಳಿಗೆ ಮಾರುಕಟ್ಟೆಯಲ್ಲಿ ದೊರೆಯುವ ಕೇಸರಿ, ಬಿಳಿ, ಹಸಿರು ಬಣ್ಣದ ರೆಡಿಮೇಡ್ ಸೀರೆ ಇಲ್ಲವೇ ಬಿಳಿ ಸಲ್ವಾರ್ ಸೂಟ್ ಜತೆಗೆ ತ್ರಿವರ್ಣ ಬಣ್ಣದ ವೇಲ್ ಕೂಡಾ ಹಾಕಬಹುದು. ಇದರ ಜತೆಗೆ ಮ್ಯಾಚಿಂಗ್ ಆಗುವಂಥ ಬಳೆ, ಕಿವಿಯೋಲೆ, ಸರವನ್ನೂ ಹಾಕಿಕೊಂಡು ಪುಟ್ಟಮಕ್ಕಳು ಓಡಾಡುತ್ತಿದ್ದರೆ ನೋಡಲು ಚಂದ ಅನಿಸುತ್ತದೆ.

ಇನ್ನು ಪುಟ್ಟ ಕೈಗಳಿಗೆ ಟ್ರೈಕಲರ್ ರಿಸ್ಟ್ ಬ್ಯಾಂಡ್, ಫ್ರೆಂಡ್‌ಶಿಪ್ ಮಾದರಿಯ ಇಲ್ಲವೇ ರಾಖಿ ಮಾದರಿಯ ಬ್ಯಾಂಡ್‌ಗಳೂ ಆಕರ್ಷಕ ನೋಟ ನೀಡುತ್ತವೆ. ಕೆನ್ನೆ ಮೇಲೆ ತ್ರಿವರ್ಣ ಧ್ವಜದ ಸ್ಟಿಕರ್ ಈಗಂತೂ ಟ್ರೆಂಡಿಯಾಗಿದೆ. ತ್ರಿವರ್ಣದ ಸ್ಯಾಟಿನ್ ಹೇರ್ ಬ್ಯಾಂಡ್, ತರಹೇವಾರಿ ಹೇರ್ ಕ್ಲಿಪ್, ಸರ, ಬಳೆಗಳೂ ಈಗ ಮಾರುಕಟ್ಟೆಯಲ್ಲಿ ದೊರೆಯುತ್ತವೆ.

ಉದ್ಯೋಗಸ್ಥ ಮಹಿಳೆಯರು, ಕಾಲೇಜು ಯುವತಿಯರು ಬಿಳಿ ಚೂಡಿದಾರ್ ಹಾಗೂ ಅದರ ಮೇಲೊಂದು ತ್ರಿವರ್ಣದ ದುಪಟ್ಟಾ ಧರಿಸಿದರೆ ಶ್ರೀಮಂತ ನೋಟ ದಕ್ಕುತ್ತದೆ. ಚೂಡಿದಾರ್ ಬೇಡ ಅನಿಸಿದವರು ಬಿಳಿ ಒಡಲು, ಕೇಸರಿ, ಹಸಿರು ಬಾರ್ಡರ್ ಇರುವ ಸೀರೆಯನ್ನೂ ಉಡಬಹುದು. ಇಲ್ಲದಿದ್ದರೆ ಮೂರು ಬಣ್ಣಗಳಲ್ಲಿ ಯಾವುದಾದರೂ ಎರಡು ಬಣ್ಣಗಳ ಕಾಂಬಿನೇಷನ್ ಇರುವ ಇಲ್ಲವೇ ಒಂದೇ ಬಣ್ಣದ ಸೀರೆ ಅಥವಾ ಚೂಡಿದಾರ್ ಧರಿಸಲು ಅಡ್ಡಿಯಿಲ್ಲ. ನೋಡಲು ತುಸು ಫ್ಯಾಷನಬಲ್ ಆಗಿ ಕಾಣಿಸಬೇಕೆನಿಸಿದರೆ ಡೆನಿಮ್ ಜೀನ್ಸ್ ಮೇಲೆ ಟ್ರೈಕಲರ್ ಟಾಪ್ ಧರಿಸಬಹುದು. ಇದಕ್ಕೆ ತಕ್ಕಂತೆ ಶೂ ಹಾಕುವುದನ್ನು ಮರೆಯದಿರಿ.

ಸೀರೆ, ಚೂಡಿದಾರ್‌ಗೆ ಮ್ಯಾಚಿಂಗ್ ತಕ್ಕಂತೆ ಕೇಸರಿ, ಬಿಳಿ, ಹಸಿರು ಕಾಂಬಿನೇಷನ್ ಇರುವ ಕಿವಿಯೋಲೆ, ಸರ, ಬಳೆಗಳನ್ನು ಧರಿಸಬಹುದು. ತ್ರಿವರ್ಣ ಕಾಂಬಿನೇಷನ್ ಸಿಗದಿದ್ದರೆ ಸಾಮಾನ್ಯವಾಗಿ ಎಲ್ಲರ ಸಂಗ್ರಹದಲ್ಲಿರುವ ಬಿಳಿ ಮುತ್ತಿನೋಲೆ, ಸರ ಧರಿಸಬಹುದು. ಅಂತೆಯೇ ಮಲ್ಲಿಗೆ ದಂಡೆಯ ಮಾದರಿಯಲ್ಲಿ ಕೃತಕದಂಡೆಗಳಲ್ಲಿ ಟ್ರೈಕಲರ್ ದಂಡೆಗಳೂ ಈಗ ಆನ್‌ಲೈನ್‌ನಲ್ಲಿ ದೊರೆಯುತ್ತವೆ. ತುರುಬು ಹಾಕಿ ಟ್ರೈಕಲರ್ ಮಲ್ಲಿಗೆ ದಂಡೆ ಮುಡಿಯಬಹುದು.

ಪುರುಷರು ಬಿಳಿ ಕುರ್ತಾ ಪೈಜಾಮದ ಜತೆಗೆ ಮೇಲೆ ವೇಯಿಸ್ಟ್ ಕೋಟ್ ಹಾಕಬಹುದು. ಬಿಳಿ ಬಣ್ಣದ ಕುರ್ತಾ ಹಾಕಿ ಬೋರ್ ಎನಿಸಿದರೆ ಹಸಿರು, ಕೇಸರಿ ಇಲ್ಲವೇ ನೀಲಿ ಪಠಾನಿ ಸ್ಟೈಲ್‌ನ ಕುರ್ತಾ ಪೈಜಾಮ ಹಾಕಬಹುದು. ತುಸು ಆಧುನಿಕ ಎನಿಸಬೇಕೆನಿಸಿದರೆ ಜೀನ್ಸ್ ಪ್ಯಾಂಟ್ ಮೇಲೆ ತ್ರಿವರ್ಣ ಧ್ವಜದ ಪೇಂಟಿಂಗ್ ಇಲ್ಲವೇ ಡಿಸೈನ್ ಇರುವಂಥ ಟೀ ಶರ್ಟ್‌ಗಳೂ ಈಗ ಆನ್‌ಲೈನ್‌ನಲ್ಲಿ ಸಿಗುತ್ತವೆ. ಅವುಗಳನ್ನೂ ಧರಿಸಬಹುದು. ಕಚೇರಿಗೆ ಫಾರ್ಮಲ್ ಉಡುಗೆಯಲ್ಲಿ ಹೋಗಬೇಕೆನ್ನುವವರು ಬಿಳಿ ಶರ್ಟ್ ಹಾಗೂ ಟೈಗೆ ಧ್ವಜದ ಮಾದರಿಯ ಟೈಪಿನ್ ಧರಿಸಬಹುದು.

ತ್ರಿವರ್ಣದ ಬ್ಯಾಡ್ಜ್ ಅನ್ನು ಮಹಿಳೆ, ಪುರುಷರು, ಪುಟ್ಟ ಮಕ್ಕಳೂ ತಮ್ಮ ಉಡುಗೆಯಲ್ಲಿ ಹಾಕಿಕೊಳ್ಳಬಹುದು. ಅಂತೆಯೇ ಕೈಗೆ ಹಾಕುವ ಟ್ರೈಕಲರ್ ಹ್ಯಾಂಡ್ ಬ್ಯಾಂಡ್ ಅನ್ನೂ ಧರಿಸಬಹುದು. ಪುಟ್ಟ ಬಾಲಕರು ಕೈಯಲ್ಲಿ ಧ್ವಜ ಹಿಡಿದು, ಕೆನ್ನೆಗೆ ತ್ರಿವರ್ಣ ಚಿತ್ತಾರ ಹಾಕಿಸಿ ಸಂಭ್ರಮ ಮೆರೆಯುವುದನ್ನೂ ಕಾಣಬಹುದು. ■